ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ ಅಷ್ಟೇ ಅಲ್ಲದೆ ಖಾಸಗಿ ಆಸ್ಪತ್ರೆಗಳಲ್ಲಿಯೂ ರೋಗಿಗಳಿಗೆ ಎಲ್ಲಾ ರೀತಿಯ ಚಿಕಿತ್ಸಾ ಸೌಲಭ್ಯ ದೊರೆಯುತ್ತಿದೆ. ಆ ಭಾಗದಲ್ಲಿರುವ ಜನ ಸಾಮಾನ್ಯರಿಗೆ ಚಿಕಿತ್ಸೆ ಪಡೆಯಲು ಯಾವುದೇ ತೊಂದರೆಯಾಗುತ್ತಿಲ್ಲ.

ಇ) 2015–16 ನೇ ಸಾಲಿನ ಆಯವ್ಯಯ ಘೋಷಣೆಯಂತೆ ಗುಲ್ಬರ್ಗಾದಲ್ಲಿ ₹. 15.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಹೃದ್ರೋಗ ಚಿಕಿತ್ಸಾ ಘಟಕವನ್ನು ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡಿದ್ದು, ಈ ಘಟಕವನ್ನು ಅಗತ್ಯ ಮೂಲಸೌಲಭ್ಯಗಳೊಂದಿಗೆ ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ.

ನೊರೆ ಮತ್ತು ಕಲಬೆರಕೆ ಪೆಟ್ರೋಲ್, ಡೀಸಲ್

3294 (3693); ಶ್ರೀ ನಾರಾಯಣಸ್ವಾಮಿ ಎಸ್.ಎನ್ (ಬಂಗಾರಪೇಟೆ)

ಅ) ರಾಜ್ಯದಲ್ಲಿ ವ್ಯಾಪಾರಿಗಳು ನಿಗಧಿತ ಬೆಲೆಗಿಂತ (ಎಂ.ಆರ್.ಪಿ) ಹೆಚ್ಚಿನ ದರಕ್ಕೆ ಸರಕುಗಳನ್ನು ಕಡಿಮೆ ತೂಕದ ಸರಕುಗಳನ್ನು ಮಾರಾಟ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವ್ಯಾಪಾರಿಗಳು ಬಳಸುವ ತಕ್ಕಡಿಗಳು ಮತ್ತು ಅಳತೆ ಮಾಪನ ಮಾಡುವ ಬಟ್ಟುಗಳು, ಲೀಟರ್‌ಗಳು ಮುಂತಾದವುಗಳನ್ನು ಇಲಾಖೆಯವರು ದಾಳಿ ಮಾಡಿ ಪರೀಕ್ಷಿಸಿದ್ದಾರೆಯೇ; ಎಷ್ಟು ದಾಳಿಗಳನ್ನು ಮಾಡಲಾಗಿದೆ (ವಿವರ ನೀಡುವುದು);

ಇ) ಪೆಟ್ರೋಲ್ ಬಂಕ್‌ಗಳಲ್ಲಿ ಅಳತೆಗಿಂತ ಕಡಿಮೆ ಮತ್ತು ಕಲಬೆರಕೆಯ ಪೆಟ್ರೋಲ್ ಮತ್ತು ಡೀಸೆಲ್ ಹಾಕುತ್ತಿರುವುದನ್ನು ಸರ್ಕಾರ ಪರೀಕ್ಷಿಸುತ್ತಿದೆಯೆ; ಎಷ್ಟು ಪ್ರಕರಣಗಳಲ್ಲಿ ತನಿಖೆ ಮಾಡಿ ಕೇಸುಗಳನ್ನು ದಾಖಲು ಮಾಡಲಾಗಿದೆ; ಸರ್ಕಾರ ಅಂತವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)

ಅ) ಹೌದು

ಆ) ಹೌದು, 2014–15ನೇ ಸಾಲಿನಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿಗಳು 1,37,363 ತಪಾಸಣೆ ಕೈಗೊಂಡು 31,475 ಮೊಕದ್ದಮೆಗಳನ್ನು ದಾಖಲಿಸಿ ₹. 6,97,98,000/– ಅಭಿಸಂಧಾನ ಶುಲ್ಕ ವಸೂಲಿ ಮಾಡಿರುತ್ತಾರೆ.

ಇ) ಹೌದು, 2014–15ನೇ ಸಾಲಿನಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿಗಳು ಪೆಟ್ರೋಲ್ ಬಂಕ್‌ಗಳ ಮೇಲೆ 2700 ತಪಾಸಣೆಗಳನ್ನು ಕೈಗೊಂಡು 162 ಮೊಕದ್ದಮೆಗಳನ್ನು ದಾಖಲಿಸಿರುತ್ತಾರೆ.

ಪೆಟ್ರೋಲ್ ಬಂಕ್‌ಗಳಲ್ಲಿ ಅಳತೆಗಿಂತ ಕಡಿಮೆ ಪೆಟ್ರೋಲ್/ಡೀಸೆಲ್ ನೀಡುತ್ತಿರುವವರ ವಿರುದ್ಧ 2 ಪ್ರಕರಣಗಳನ್ನು ದಾಖಲಿಸಲಾಗಿದೆ. ರಾಜ್ಯದಲ್ಲಿ ಒಟ್ಟು 2,844 ಪೆಟ್ರೋಲ್ ಬಂಕ್‌ಗಳಿದ್ದು ಕಳೆದ ಸಾಲಿನಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಅಧಿಕಾರಿಗಳು 308 ಪೆಟ್ರೋಲ್ ಬಂಕ್‌ಗಳ ತಪಾಸಣೆ ನಡೆಸಿರುತ್ತಾರೆ. ಹಾಗೂ ಪೆಟ್ರೋಲ್ ಬಂಕ್‌ಗಳಲ್ಲಿ ಅಳತೆಗಿಂತ ಕಡಿಮೆ ಮತ್ತು ಕಲಬೆರಕೆ ಪೆಟ್ರೋಲ್ ಮತ್ತು ಡೀಸೆಲ್ ವಿತರಿಸುತ್ತಿದ್ದ ಬಗ್ಗೆ ನಾಲ್ಕು ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ವಿವರ ಕೆಳಕಂಡಂತಿದೆ.

ಪ್ರಕರಣ:1

ದಿನಾಂಕ: 11.10.2014ರಂದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ತಂಗಡಗಿ ಗ್ರಾಮದ ಗಡೇದ ಪೆಟ್ರೋಲ್ ಬಂಕ್ ತಪಾಸಣೆ ನಡೆಸಿದ ಸಂದರ್ಭದಲ್ಲಿ 344 ಲೀಟರ್ ಪೆಟ್ರೋಲ್ ಹೆಚ್ಚಿಗೆ ಇರುವುದು ಕಂಡು ಬಂದಿರುತ್ತದೆ. ಇದರಿಂದ ಪೆಟ್ರೋಲ್ ಬಂಕ್‌ನವರು ಗ್ರಾಹಕರಿಗೆ ಅಳತೆಗಿಂತ ಕಡಿಮೆ ಪ್ರಮಾಣದಲ್ಲಿ ವಿತರಿಸುತ್ತಿದ್ದಾರೆಂದು ಸಂಬಂಧಿಸಿದ

ತೈಲ ಕಂಪನಿ ಅಧಿಕಾರಿಗಳಿಗೆ ವರದಿ ಮಾಡಲಾಗಿ ಈ ಬಂಕನ್ನು 15 ದಿನಗಳ ಕಾಲ ಮುಚ್ಚಿಸಿರುತ್ತಾರೆ.

ಪ್ರಕರಣ:2 ಮತ್ತು 3

ದಿನಾಂಕ: 07.07.2014 ಮತ್ತು 19.09.2014 ರಂದು ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನ ಜಾಫರ್ ಪೆಟ್ರೋಲ್ ಬಂಕ್ ಹಾಗೂ ಎಸ್.ಎಸ್.ಕುಲಕರ್ಣಿ ಪೆಟ್ರೋಲ್ ಬಂಕ್ ತಪಾಸಣೆ ಸಂದರ್ಭದಲ್ಲಿ ಪೆಟ್ರೋಲ್ ಕಲಬೆರಕೆಯಾಗಿರುವ ಬಗ್ಗೆ ಸ್ಯಾಂಪಲ್ ಡ್ರಾ ಮಾಡಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿ ಪ್ರಯೋಗಾಲಯದ ವರದಿಯಲ್ಲಿ ಪೆಟ್ರೋಲ್‌ನಲ್ಲಿ ಕಲಬೆರಕೆ ಇರುವುದಿಲ್ಲವೆಂದು ವರದಿಯಾಗಿರುತ್ತದೆ.

ಪ್ರಕರಣ:4

2015ರ ಫೆಬ್ರವರಿ ಮಾಹೆಯಲ್ಲಿ ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕಿನ ಭೈರವೇಶ್ವರ ಪೆಟ್ರೋಲ್ ಬಂಕ್ ತಪಾಸಣೆ ಸಂದರ್ಭದಲ್ಲಿ ಪೆಟ್ರೋಲ್ ಕಲಬೆರಕೆಯಾಗಿರುವ ಬಗ್ಗೆ ಸ್ಯಾಂಪಲ್ ಡ್ರಾ ಮಾಡಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿ ಪ್ರಯೋಗಾಲಯದ ವರದಿಯಲ್ಲಿ ಪೆಟ್ರೋಲ್‌ನಲ್ಲಿ ನೀರು ಸೇರಿರುವುದಾಗಿ ವರದಿಯಾಗಿರುತ್ತದೆ. ಈ ಬಗ್ಗೆ ಪ್ರಕರಣವನ್ನು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ದಾಖಲಿಸಲಾಗಿದ್ದು ಪ್ರಕರಣ ವಿಚಾರಣೆ ಹಂತದಲ್ಲಿದೆ.